ದಿ ಭಾರತ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ನಂ.30, 15ನೇ ಅಡ್ಡ ರಸ್ತೆ, 3ನೇ ವಿಭಾಗ, ಜಯನಗರ, ಬೆಂಗಳೂರು-560 011

2017-18ನೇ ಸಾಲಿನ ವಾರ್ಷಿಕ ವರದಿ

ಮಾನ್ಯ ಸದಸ್ಯರೇ,

ದಿನಾಂಕ 21.08.1974 ರಂದು ಸಹಕಾರ ರತ್ನ ಸನ್ಮಾನ್ಯ ಶ್ರೀ ಬಿ ಎಲ್ ಲಕ್ಕೇಗೌಡರಿಂದ ಸ್ಥಾಪಿತವಾಗಿ ದಿನಾಂಕ 03.01.1975ರಲ್ಲಿ ವ್ಯವಹಾರಗಳನ್ನು ನಡೆಸಲು ಭಾರತೀಯ ರಿಸರ್ವ್ ಬ್ಯಾಂಕ್ ನಿಂದ ಅನುಮತಿ ಪಡೆದು ದಿನಾಂಕ 27.03.1975ರಲ್ಲಿ ತನ್ನ ವ್ಯವಹಾರಗಳನ್ನು ಪ್ರಾರಂಭಿಸಿ ಬ್ಯಾಂಕು 43 ವರ್ಷಗಳ ಸೇವೆಯನ್ನು ಪೂರೈಸಿ, 44ನೇ ವರ್ಷಕ್ಕೆ ಕಾಲಿಟ್ಟಿದೆ. ಈ ಸಂದರ್ಭದಲ್ಲಿ ಬ್ಯಾಂಕಿನ ಹುಟ್ಟು ಮತ್ತು ಬೆಳವಣಿಗೆಗೆ ಕಾರಣರಾದ ಸಂಸ್ಥಾಪಕರಾದ ಸನ್ಮಾನ ಶ್ರೀ ಬಿ.ಎಲ್.ಲಕ್ಕೇಗೌಡರ ಮಾರ್ಗದರ್ಶನವನ್ನು ಸ್ಮರಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಹಣಕಾಸು, ಆರ್ಥಿಕ ಸಾಧನೆ ಮತ್ತು ವ್ಯವಹಾರಗಳ ಮುಖ್ಯಾಂಶಗಳ ವಿವರಗಳನ್ನು ಕೊನೆಯ ಪುಟದಲ್ಲಿ ನಮೂದಿಸಿದೆ. ಬ್ಯಾಂಕು ಎಲ್ಲಾ ರೀತಿಯಲ್ಲೂ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು ವರದಿ ಸಾಲಿನಲ್ಲಿ ಠೇವಣಿ, ಸಾಲಗಳು, ನಿವ್ವಳ ಲಾಭ ಮತ್ತು ವಸೂಲಾತಿ ಕ್ಷೇತ್ರಗಳಲ್ಲಿ ಸರ್ವತೋಮುಖ ಬೆಳವಣಿಗೆ ಹೊಂದಿದೆಯೆಂದು ಹಾಗೂ ಬ್ಯಾಂಕಿನ ಒಟ್ಟು ವ್ಯವಹಾರ ರೂ.68135 ಲಕ್ಷಗಳಾಗಿದ್ದು ಕಳೆದ ವರ್ಷಕ್ಕೆ ಹೋಲಿಸಿದರೆ ರೂ.7767 ಲಕ್ಷ ಹೆಚ್ಚಳವಾಗಿ ಶೇ. 12.87 ರಷ್ಟು ವೃದ್ಧಿಯಾಗಿದೆಯೆಂದು ತಿಳಿಸಲು ಹರ್ಷಿಸುತ್ತೇವೆ. ವರದಿ ಸಾಲಿನಲ್ಲಿ ಠೇವಣಿಗಳು ರೂ. 3685 ಲಕ್ಷ ಹೆಚ್ಚಳವಾಗಿದ್ದು ಪೂರ್ತಿ ಠೇವಣಿ ಸಂಗ್ರಹಣೆ ಒಳ್ಳೆಯ ಸಾಲಗಳಲ್ಲಿ ನೀಡಿಕೆಯಾಗಿ ಸದ್ಬಳಕೆಯಾಗಿದ್ದು, ಸಾಲಗಳು ರೂ. 4082 ಲಕ್ಷ ಹೆಚ್ಚಳವಾಗಿ ರೂ. 25039 ಲಕ್ಷಗಳಿಗೆ ತಲುಪಿರುವುದನ್ನು ತಿಳಿಸಲು ಹರ್ಷಿಸುತ್ತೇವೆ. ಕೆಲವು ಕಠಿಣ ಕ್ರಮಗಳ ಪರಿಣಾಮ ವಸೂಲಾತಿಯು ಪ್ರತಿ ವರ್ಷ ಉತ್ತಮಗೊಳ್ಳುತ್ತಿದ್ದು. ದಿನಾಂಕ 31.03.2018ರ ಅಂತ್ಯಕ್ಕೆ ಒಟ್ಟು ಎನ.ಪಿ.ಎ. ಶೇ.4.09 ಇದ್ದು, ನಿವ್ವಳ ಎನ್.ಪಿ.ಎ. ಶೇ.0.22 ರಷ್ಟಾಗಿರುತ್ತದೆ. ದಿನಾಂಕ : 31.03.2017ಕ್ಕೆ ಇದ್ದ ಒಟ್ಟು ಎನ್.ಪಿ.ಎ. ಶೇ.6.44 ರಿಂದ ಶೇ.4.09ಕ್ಕೆ ಇಳಿಸಿರುವುದು ಮತ್ತು ನಿವ್ವಳ ಎನ್.ಪಿ.ಎ. ಶೇ.1.86 ರಿಂದ ಶೇ.0.22 ಇಳಿಕೆಯಾಗಿರುವುದು ಬ್ಯಾಂಕಿನ ಆಡಳಿತದಲ್ಲಿನ ಸಾಮರ್ಥ್ಯಕ್ಕೆ ಹಿಡಿದ ಕೈಗನ್ನಡಿಯಾಗಿದ್ದು, ಇದು ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಯ ಕಾರ್ಯಸಾಧನೆಯನ್ನು ಎತ್ತಿ ತೋರಿಸುತ್ತದೆ. 2017-18ನೇ ಸಾಲಿನಲ್ಲಿ ಒಟ್ಟು ಲಾಭ ರೂ.412.70 ಲಕ್ಷ ಗಳಿಸಿದ್ದು. ಆದಾಯ ತೆರಿಗೆ ಪೂರ್ವ ನಿವ್ವಳ ಲಾಭ ರೂ. 290.15 ಲಕ್ಷಗಳು ಮತ್ತು ಆದಾಯ ತೆರಿಗೆ ಜಾತ ರೂ. 118.43 ಲಕ್ಷಗಳನ್ನು ಕಳೆದು ರೂ. 71.72 ಲಕ್ಷಗಳ ನಿವ್ವಳ ಲಾಭಗಳಿಸಿ ಸದಸ್ಯರಿಗೆ ಶೇ.14 ರಷ್ಟು ಡಿವಿಡೆಂಡ್ ನೀಡಲು ಆಡಳಿತ ಮಂಡಳಿ ಶಿಫಾರಸ್ಸು ಮಾಡಿದೆ.

ಬೇಗೂರಿನಲ್ಲಿ ಬ್ಯಾಂಕಿನ ಹೊಸ ಶಾಖೆಯು ದಿನಾಂಕ: 19.01.2018ರಿಂದ ಕಾರ್ಯರಂಭ ಮಾಡಿದ್ದು, ಸುತ್ತಮುತ್ತಲಿನ ಮಾನ್ಯ ಸದಸ್ಯರುಗಳು ಈ ಶಾಖೆಯಲ್ಲಿ ವ್ಯವಹರಿಸಬೇಕಾಗಿ ವಿನಂತಿ.

ಸ್ಮರಣೆ :– 2017–18ನೇ ವರದಿ ಸಾಲಿನಲ್ಲಿ ಈ ಕೆಳಕಂಡ 103 ಸದಸ್ಯರುಗಳು ದೈವಾಧೀನರಾಗಿರುತ್ತಾರೆ. ಮೃತ್ತರ ಆತ್ಮಕ್ಕೆ ಶಾಂತಿ ಕೋರಿ ಅವರ ಕುಟುಂಬಕ್ಕೆ ಸಂತಾಪ ಸೂಚಿಸುವುದು ನಮ್ಮ ಅಧ್ಯಕರ್ತವ್ಯವಾಗಿದೆ.

ಮರಣ ಹೊಂದಿರುವ ಸದಸ್ಯರ ವಿವರ ದಿನಾಂಕ 01.04.2017 ರಿಂದ 31.03.2018ರವರೆವಿಗೆ.

ಕ್ರಸಂ.	ಸದಸ್ಯರ ಹೆಸರು	L.F. No.	ಕ್ರಸಂ.	ಸದಸ್ಯರ ಹೆಸರು	L.F. No.	ಕ್ರಸಂ.	ಸದಸ್ಯರ ಹೆಸರು	L.F. No.
	ಶ್ರೀಮತಿ/ಶ್ರೀ							
1	ರಾಮಕೃಷ್ಣಯ್ಯ ಕೆ.ಎನ್.	7520/R	35	ಕೋಮಲವಲ್ಲಿ ಆರ್	24983/R	70	ಮೋಹಿನಿ ಪ್ರಭಾಕರ್	20599/R
2	ಮೂರ್ತಿ ಪಿ.ಕೆ.ವಿ.	24085/R	36	ವಿಜಯರಂಗರಾಮ್ ಟಿ.ಎಸ್.	17528/R	71	ಶ್ರೀನಿವಾಸ ಕೆ.ಟಿ	21737/R
3	ಬಿಳಿಗಿರಿ ಎಸ್	3764/R	37	ಗಂಗಪ್ಪ ಕೆ	16920/R	72	ಸಿದ್ದೇಗೌಡ ಸಿ	37726/R
4	ಅನಂತ ಜಿ.ಎನ್.	8993/R	38	ಮೈಲಾರಿ ರಾವ್ ಎಸ್	4612/R	73	ನಾಗೇಂದ್ರಕುಮಾರ್ ಕೆ.ಎ.	44242/R
5	ಉಮೇಶ್ ರಾವ್ ಆರ್	34474/A	39	ಆರೋಗ್ಯಸ್ವಾಮಿ	32820/R	74	ಸತ್ಯಪ್ರೇಮ ಕುಮಾರ್ ಬಿ.ಎನ್.	40830/R
6	ವೆಂಕಟರಾಜು ಎ	8467/R	40	ಕೃಷ್ಣೆಗೌಡ ಜಿ ಎಸ್	23775/R	75	ಚೌಡಪ್ಪ ಕೆ.ಟಿ.	354/R
7	ರಂಗರಾಜು ಬಿ.ಆರ್.	15089/R	41	ನಟರಾಜ್ ಎನ್	9919/R	76	ನಂಜಾಚಾರಿ	5829/R
8	ಗೋವಿಂದಪ್ಪ ಎನ್.ಪಿ.	28453/R	42	ಕಪನಯ್ಯ ಸಿ.ಕೆ	15768/R	77	ಮಾದೇಗೌಡ ಕೆ.ಬಿ.	13465/R
9	ವಸಂತಕುಮಾರ್	29949/R	43	ಸ್ವಾಮಿ ಕೆ.ಟಿ.	24332/R	78	ಅನ್ವರ್ ಬೇಗ್	19239/R
10	ನಾರಾಯಣಸ್ವಾಮಿ ಬಿ	372/R	44	ಬೆಟ್ಟಸ್ವಾಮಿ ಹೆಚ್	5024/R	79	ಪಾಪಮ್ಮ	11123/R
11	ಲಕ್ಕಮ್ಮ ಎಸ್	4193/R	45	ಸಾವಿತ್ರಮ್ಮ	30980/A	80	ರಾಮಯ್ಯ ಪಿ	20440/R
12	ಗೋವಿಂದಪ್ಪ ಎಸ್	11765/R	46	ಶಾರದಮ್ಮ	5819/R	81	ಮೂಡಲಗಿರಯಪ್ಪ ಕೆ.ಸಿ	3627/R
13	ಚಲುವರಾಜ್ ಆರ್.ಎಸ್.	4626/R	47	ವಾಸುದೇವ ಬಿ.ಎಸ್.	49399/R	82	ಸರೋಜ ಹೆಚ್.ಎ	51296/R
14	ಚಂದ್ರಪ್ಪ ಹೆಚ್.ಎಂ	18523/R	48	ವೆಂಕಟೇಶ್ ಎಸ್.ಎಂ	4406/R	83	ಲಕ್ಷ್ಮಣ್ ಕಾಳಿ	48017/R
15	ಬಸವೇಗೌಡ ಜೆ	6835/R	49	ಲಕ್ಷ್ಮಮ್ಮ ಎಂ	46733/R	84	ನ್ಯಾನಚಾರಿ ಇ	25109/R
16	ಶಿವಣ್ಣ ಎನ್	7038/R	50	ರಾಜೇಂದ್ರ ಆರ್	27370/A	85	ಸೀತಾಲಕ್ಷ್ಮಿ ಟಿ	31056/R
17	ಚಿಕ್ಕಲಿಂಗಯ್ಯ	43397/R	51	ರಾಜಣ್ಣ	46826/R	86	ನಾಗೇಂದ್ರ ಕೆ.ವಿ.	10051/R
18	ಪದ್ಮಾವತಿ ಎಸ್	3327/R	52	ಶಂಕರ್ ಡಿ ಆರ್	28063/A	87	ನಾಗರತ್ನ	43057/R
19	ಜವರಯ್ಯ ಸಿ.ಎಂ.	1977/R	53	ಶಿವಲಿಂಗಯ್ಯ ಎಂ ಕೆ	6564/R	88	ವೀರಣ್ಣ ಎಸ್	23288/R
20	ಕೆಂಪಮ್ಮ	11033/R	54	ಮುನಿಯಪ್ಪ	48441/R	89	ಮುನಿಯಪ್ಪ ವಿ	16615/R
21	ಗಜರಾಜನ್ ಟಿ.ಸಿ.	11498/R	55	ಸಿದ್ದರಾಜು ಸಿ	39314/A	90	ಕಾಳಯ್ಯ ಕೆ	5840/R
22	ಪದ್ಮನಾಭ ರಾವ್ ಎಸ್.	22014/R	56	ಲೋಕೇಶ್ ಕುಮಾರ್ ಆರ್	49684/R	91	ವೆಂಕಟಗಿರಯಪ್ಪ	3575/R
23	ಕಾಮಕ್ಷಿ ಆಂಜನೇಯಲು	39426/R	57	ಮುನೇಗೌಡ ಕೆ ಎಸ್	2293/R	92	ತುಳಸಿರಾಮೇಗೌಡ ಎಂ.ಟಿ	8464/R
24	ಕೃಷ್ಣಪ್ಪ ಡಿ	16062/R	58	ಲೀಲ ಎನ್	15162/R	93	ತಿಮ್ಮಪ್ಪ	49542/R
25	ಬೋರೇಗೌಡ ಹೆಚ್.ಟಿ	28479/R	59	ನಾಗೇಶ್ವರ ರಾವ್	26876/A	94	ವಸಂತಕುಮಾರಿ ಎಸ್	47154/R
26	ಜಯಮ್ಮ	9250/R	60	ಶ್ರೀನಿವಾಸ್ ಟಿ	23698/R	95	ಮಹಬೂಬ್ ಶರೀಫ್	44832/R
27	ಶೇಷಗಿರಿ ಎನ್.ಟಿ.	451/R	61	ರಾಮರತ್ನಂ ಎಸ್	3508/R	96	ಕರಗೇಗೌಡ ಬಿ	50275/R
28	ಶಿವಶಂಕರ್ ಎ.ಬಿ.	4623/R	62	ರತ್ನಕುಮಾರಿ	12102/R	97	ಲಿಂಗಯ್ಯ ಎನ್	20282/R
29	ಶ್ರೀರಾಮಯ್ಯ ಎ	27936/R	63	ಗಿರಿಜನ್ ಪಿ	17191/R	98	ಕೃಷ್ಣ ಕೆ ಎಸ್	10804/R
30	ಶ್ರೀಕಾಂತರಾವ್ ಜಿ.ವಿ	16169/R	64	ಪ್ರಕಾಶ್ ಶಂಕರ್ ಹೆಚ್ ಎಸ್	24854/R	99	ಯಶೋಧ ಹೆಚ್.ಎಸ್	24157/R
31	ಸುವರ್ಣ ಹೆಚ್.ಬಿ	46612/R	65	ಶ್ರೀನಿವಾಸ್ ಎಂ ಹೆಚ್	45462/R	100	ಸುರೇಶ ಎಂ.ಆರ್.	40316/R
32	ವಿಜಯಕುಮಾರ್ ಎಂ		66	ಗಂಗಹನುಮಯ್ಯ ಎಸ್ ಎನ್	20018/R	101	ಚಂದ್ರಶೇಖರ್ ಎ.ಸಿ	31609/R
	ಜೋಡಗೆ	36404/A	67	ಚಂದ್ರರಾವ್ ಸಿರಾಳೆ	2424/R	102	ಶ್ರೀನವಾಸ ಎನ್	4720/R
33	ರಾಮಚಂದ್ರಯ್ಯ ವಿ	2203/R	68	ಮುನಿರೆಡ್ಡಿ ಎನ್.	20208/R	103	ರಂಗೇಗೌಡ ಎಂ.ಆರ್.	4693/R
34	ಶಾರದಮ್ಮ. ಜಿ	47272/R	69	ವೇಣುಗೋಪಾಲ್ ಟಿ	3323/R			

ದಿನಾಂಕ : 17-09-2017ರಂದು ನಡೆದ ಸರ್ವಸದಸ್ಯರ ಸಭೆಯ ನಡಾವಳಿಗಳ ಮೇಲೆ ಕ್ರಮ ಕೈಗೊಂಡ ಬಗ್ಗೆ ವರದಿ

1. ಸಂಶಾಯಾತ್ಮಕ ಸಾಲಗಳಲ್ಲಿ ವಸೂಲಾಗದೆ ಇದ್ದ 140 ಸಾಲಗಳಿದ್ದು, ಇದರಲ್ಲಿ 34 ಖಾತೆಗಳು ಮುಕ್ತಾಯವಾಗಿದ್ದು ಉಳಿದ ಸಾಲದ ಖಾತೆಗಳಲ್ಲಿ ಭಾಗಶಃ ವಸೂಲಾಗಿರುವ ಖಾತೆಗಳು 20 ಇದ್ದು, ರೂ 6,19,000/–ಗಳ ಮೊತ್ತ ವಸೂಲಾಗಿರುತ್ತದೆ. ಇವುಗಳ ವಸೂಲಾತಿಗೆ ತೀವ್ರ ಕ್ರಮಕೈಗೊಳ್ಳಲಾಗಿದೆ.
2. ಠೇವಣಿಗಳು ಮತ್ತು ಸಾಲಗಳ ಮೇಲಿನ ಬಡ್ಡಿ ದರಗಳನ್ನು ಪರಿಷ್ಕರಿಸಲಾಗಿದೆ.
3. ಹೆಚ್ಚುವರಿ ನಿಧಿಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಿ ಈ ಸಾಲಿನಾಂತ್ಯಕ್ಕೆ ಸಾಲಗಳು ರೂ.25039 ಲಕ್ಷಗಳಿಗೆ ತಲುಪಿ, ಸಾಲ ಮತ್ತು ಠೇವಣಿ ಅನುಪಾತ ಶೇ.58.10 ರಷ್ಟಾಗಿರುತ್ತದೆ.
4. ಓವರ್‌ಡ್ರಾಫ್ಟ್ ಮತ್ತು ವ್ಯಾಪಾರ ಅಭಿವೃದ್ಧಿ ಸಾಲಗಳ ಗರಿಷ್ಠ ಮಿತಿಯನ್ನು ಹೆಚ್ಚಿಸಲಾಗಿರುತ್ತದೆ.
5. ATM Rupay Card ಅನ್ನು ಎಲ್ಲಾ ಸದಸ್ಯರು/ಗ್ರಾಹಕರಿಗೆ ವಿತರಿಸಲಾಗುತ್ತಿದೆ. ಸದಸ್ಯರು/ಗ್ರಾಹಕರು ATM Rupay Card ಅನ್ನು ಪಡೆದುಕೊಳ್ಳಲು ಕೋರಲಾಗಿದೆ
6. ಬೇಗೂರು ಶಾಖೆಯನ್ನು ತೆರೆಯಲಾಗಿದೆ.

ಪ್ರಗತಿ :–

ಬ್ಯಾಂಕಿನ ಹಣಕಾಸು ಸಾಧನೆ ಮತ್ತು ವ್ಯವಹಾರಗಳ ಪ್ರಗತಿಯ ಮುಖ್ಯಾಂಶಗಳು :–

ಬ್ಯಾಂಕಿನ ತುಲನಾತ್ಮಕ ಹಣಕಾಸಿನ ವಿವರ ಕೆಳಕಂಡಂತಿದೆ. ಈ ಅಂಕಿ ಅಂಶಗಳಿಂದ ಕಳೆದ ಐದು ವರ್ಷಗಳಿಂದ ಆದ ಬ್ಯಾಂಕಿನ ಸರ್ವಾಂಗೀಣ ಬೆಳವಣಿಗೆಯನ್ನು ಕಾಣಬಹುದಾಗಿದೆ.

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ವಿವರ	31.03.2014	31.03.2015	31.03.2016	31.03.2017	31.03.2018
1	ಸದಸ್ಯರುಗಳ ಸಂಖ್ಯೆ	41440	41644	41775	41808	41869
2	ಷೇರು ಬಂಡವಾಳ	477.79	450.32	532.05	642.28	859.31
3	ಕಾಯ್ದಿಟ್ಟ ನಿಧಿ ಮತ್ತು ಇತರೆ ನಿಧಿಗಳು	2634.54	2655.51	2727.08	2653.35	2770.94
4	ಠೇವಣಿಗಳು	20723.63	28591.21	33123.73	39411.24	43095.98
5	ಹೂಡಿಕೆಗಳು	7830.77	11396.10	14277.11	18822.95	19742.27
6	ಸಾಲ ಮತ್ತು ಮುಂಗಡಗಳು	15751.16	19213.72	20892.04	20956.73	25039.14
7	ದುಡಿಯುವ ಬಂಡವಾಳ	24612.71	32230.00	37017.93	43306.20	47462.92
8	ನಿವ್ವಳ ಲಾಭ	178.46	117.90	142.43	187.39	171.72
9	Capital to Risk Assets Ratio (CRAR)	ಶೇ.12.11	ಶೇ.10.19	ಶೇ.11.07	ಶೇ.10.50	ಶೇ.9.74
10	ಒಟ್ಟು ಎನ್.ಪಿ.ಎ.	ಶೇ.2.29	ಶೇ.4.44	ಶೇ.4.29	ಶೇ.6.44	ಶೇ.4.09
11	ನಿವ್ವಳ ಎನ್.ಪಿ.ಎ.	ಶೇ.0	ಶೇ.0	ಶೇ.0	ಶೇ.1.86	ಶೇ.0.22

ಬ್ಯಾಂಕಿನ ಕಾರ್ಯವ್ಯಾಪಿ:–

ಬ್ಯಾಂಕಿನ ಕಾರ್ಯವ್ಯಾಪ್ತಿಯ ಬೆಂಗಳೂರು, ಬೆಂಗಳೂರು ಗ್ರಾಮಾಂತರ, ರಾಮನಗರ, ಹಾಸನ ಮತ್ತು ಮೈಸೂರು ಈ 5 ಜಿಲ್ಲೆಗಳಿಗೆ ಸೀಮಿತವಾಗಿದೆ.

ಬ್ಯಾಂಕಿನ ಆರ್ಥಿಕ ಫಲಿತಾಂಶದ ವಿವರ :

1. ಸದಸ್ಯತ್ವ ಮತ್ತು ಷೇರು ಬಂಡವಾಳ

1) ಸದಸ್ಯತ್ವ :

ದಿನಾಂಕ 31.03.2018 ಕ್ಕೆ ಬ್ಯಾಂಕಿನಲ್ಲಿ ಒಟ್ಟು 41869 ಸದಸ್ಯರಿರುತ್ತಾರೆ

(ಸದಸ್ಯರು : 33211, ಸಹ ಸದಸ್ಯರು : 8649 ಮತ್ತು ಸಂಘ-ಸಂಸ್ಥೆಗಳು : 9)

2) ಅಧಿಕೃತ ಷೇರು ಬಂಡವಾಳ :

ಬ್ಯಾಂಕಿನ ಅಧಿಕೃತ ಷೇರು ಬಂಡವಾಳವು ಹಾಲಿ ರೂ.10 ಕೋಟಿಗಳಾಗಿರುತ್ತದೆ. ಸಂದಾಯವಾದ ಷೇರು ಬಂಡವಾಳ ದಿನಾಂಕ 31.03.2018ಕ್ಕೆ ರೂ. 8.59 ಕೋಟಿಗಳಾಗಿರುತ್ತದೆ. ಆದ್ದರಿಂದ ಅಧಿಕೃತ ಷೇರು ಬಂಡವಾಳವನ್ನು ರೂ. 10 ಕೋಟಿಗಳಿಂದ 15 ಕೋಟಿಗಳಿಗೆ ಹೆಚ್ಚಿಸಲು ಆಡಳಿತ ಮಂಡಳಿಯು ವಾರ್ಷಿಕ ಮಹಾಸಭೆಗೆ ಶಿಫಾರಸ್ಸು ಮಾಡಿದೆ.

ಎ) ಷೇರು ಬಂಡವಾಳ :

ದಿನಾಂಕ : 31.03.2018ರ ಅಂತ್ಯಕ್ಕೆ ಸಂದಾಯವಾಗಿರುವ ಷೇರು ಬಂಡವಾಳ ರೂ.859.31 ಲಕ್ಷಗಳು, ವರದಿ ಸಾಲಿನಲ್ಲಿ ರೂ.217.03 ಲಕ್ಷ ಹೆಚ್ಚಳವಾಗಿರುತ್ತದೆ.

2. ಕಾಯ್ದಿಟ್ಟ ನಿಧಿ ಮತ್ತು ಇತರೆ ನಿಧಿಗಳು :

ಬ್ಯಾಂಕಿನ ಕಾಯ್ದಿಟ್ಟ ನಿಧಿ ಮತ್ತು ಇತರೆ ನಿಧಿಗಳು ಪ್ರತಿ ವರ್ಷ ಹೆಚ್ಚುತ್ತಾ ಬಂದಿದ್ದು. ದಿನಾಂಕ : 31.03.2018ರ ಅಂತ್ಯಕ್ಕೆ ಇದರ ಒಟ್ಟು ಮೊತ್ತ ರೂ. 2770.94 ಲಕ್ಷಗಳಾಗಿದ್ದು ಇದಕ್ಕೆ 2017-2018ನೇ ಸಾಲಿನ ಲಾಭಾಂಶ ಸೇರಿದರೆ ಒಟ್ಟು ಮೊತ್ತ ರೂ. 2843.49 ಲಕ್ಷಗಳಾಗುತ್ತದೆ. ಇದು ದುಡಿಯುವ ಬಂಡವಾಳಶದ ಶೇ 5.99ರಷ್ಟು ಸ್ವಂತ ನಿಧಿಗಳಿರುವುದು ಬ್ಯಾಂಕಿನ ಸದೃಡತೆಗೆ ಸಾಕ್ಷಿ. ವಿವರ ಕೆಳಕಂಡಂತೆ ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ವಿವರ	31.03.2014	31.03.2015	31.03.2016	31.03.2017	31.03.2018
1	ಕಾಯ್ದಿಟ್ಟ ನಿಧಿ	618.65	671.57	720.24	775.57	837.05
2	ಕಟ್ಟಡ ನಿಧಿ	317.27	349.18	362.04	382.77	403.22
3	ಕರಡು ಮತ್ತು ಸಂಶಯಾತ್ಮಕ ನಿಧಿ	976.80	976.80	976.80	976.80	970.62
4	ಸದಸ್ಯರ ಕ್ಷೇಮ ನಿಧಿ	23.89	24.06	23.98	23.84	23.62
5	ಸದಸ್ಯರ ಮರಣ ಪರಿಹಾರ ನಿಧಿ	32.30	38.73	35.48	33.84	37.37
6	ಲಾಭಾಂಶ ಸಮತೋಲನ ನಿಧಿ	23.04	23.04	23.04	23.04	23.04
7	ಹೂಡಿಕೆ ಏರಿಳಿತಕ್ಕೆ ಕಾಯ್ದಿಟ್ಟ ನಿಧಿ	127.80	144.34	146.05	152.27	25.10
8	ಹೂಡಿಕೆಗಳ ಮೇಲೆ ಸವಕಳಿ ನಿಧಿ	418.42	317.47	317.47	159.87	295.22
9	ಸಿಬ್ಬಂದಿ ಕ್ಷೇಮ ನಿಧಿ	3.85	3.85	3.85	3.85	3.85
10	ಧರ್ಮೋದ್ಧೇಶ ನಿಧಿ	1.97	1.97	1.97	1.97	1.97
11	ಮಹೋತ್ಸವ ನಿಧಿ	12.49	13.78	13.78	13.78	26.05

12	ಉತ್ಪಾದಕ ಆಸ್ತಿಗಳ ನಿಧಿ	61.56	73.46	80.00	81.00	98.00
13	ಇತರೆ ನಿಧಿಗಳು	16.50	17.26	22.38	24.75	25.83
	ಒಟ್ಟು ಮೊತ್ತ	**2634.54**	**2655.51**	**2727.08**	**2653.35**	**2770.94**

3. ದುಡಿಯುವ ಬಂಡವಾಳ :

ಬ್ಯಾಂಕಿನ ದುಡಿಯುವ ಬಂಡವಾಳ (ಸ್ವಂತ ನಿಧಿ, ಠೇವಣಿ ಮತ್ತು ಇತರೆ ಜವಾಬ್ದಾರಿಗಳು) ದಿನಾಂಕ 31.03.2018ರ ಅಂತ್ಯಕ್ಕೆ ರೂ.47462.92 ಲಕ್ಷಗಳಾಗಿರುತ್ತದೆ. ಹಿಂದಿನ ಸಾಲಿಗೆ ಹೋಲಿಸಿದಾಗ ವರ್ಷಾಂತ್ಯಕ್ಕೆ ರೂ.4102.72 ಲಕ್ಷಗಳು (ಶೇ.9.46) ಹೆಚ್ಚಳವಾಗಿರುತ್ತದೆ.

4. ಹೂಡಿಕೆಗಳು :

ಹೂಡಿಕೆಗಳ ಮಟ್ಟ ದಿನಾಂಕ 31.03.2018ರ ಅಂತ್ಯಕ್ಕೆ ರೂ.19742.27 ಲಕ್ಷಗಳಾಗಿರುತ್ತದೆ. ವರದಿ ಸಾಲಿನಲ್ಲಿ ರೂ.919.32 ಲಕ್ಷಗಳು (ಶೇ.4.88) ಹೆಚ್ಚಳವಾಗಿರುತ್ತದೆ.

5. ಠೇವಣಿಗಳು :

ಬ್ಯಾಂಕಿನ ಒಟ್ಟು ಠೇವಣಿಗಳು ದಿನಾಂಕ 31.03.2018ರ ಅಂತ್ಯಕ್ಕೆ ರೂ.43095.98 ಲಕ್ಷಗಳಾಗಿರುತ್ತದೆ. ವರದಿ ಸಾಲಿನಲ್ಲಿ ರೂ.3684.74 ಲಕ್ಷಗಳು (ಶೇ.9.35) ಹೆಚ್ಚಳವಾಗಿರುತ್ತದೆ.

ಠೇವಣಿ ಮೇಲೆ ಹಿರಿಯ ನಾಗರೀಕರುಗಳಿಗೆ ಶೇ.0.5ರಷ್ಟು ಹೆಚ್ಚಿನ ಬಡ್ಡಿ ನೀಡಲಾಗುತ್ತಿದೆ. ಸದಸ್ಯರುಗಳು ತಮ್ಮ ಉಳಿತಾಯ ಹಣವನ್ನು ಠೇವಣಿಯಲ್ಲಿ ತೊಡಗಿಸಿ ಬ್ಯಾಂಕಿನ ಪ್ರಗತಿಗೆ ಸಹಾಯಕರಾಗಬೇಕೆಂದು ಕೋರಿದೆ.

6. 1) ಸಾಲಗಳು ಮತ್ತು ಮುಂಗಡಗಳು :

ದಿನಾಂಕ 31.03.2018ರ ಅಂತ್ಯಕ್ಕೆ ಬ್ಯಾಂಕಿನ ಒಟ್ಟು ಸಾಲ ಮತ್ತು ಮುಂಗಡಗಳು ರೂ.25039.14 ಲಕ್ಷಗಳಾಗಿರುತ್ತದೆ. ವರದಿ ಸಾಲಿನಲ್ಲಿ ರೂ.4082.41 (ಶೇ.19.48) ಹೆಚ್ಚಳವಾಗಿದೆ. ಬ್ಯಾಂಕು ಸಾಧಿಸಿರುವ ಹೆಚ್ಚಿನ ಠೇವಣಿ ಸಂಗ್ರಹಣೆ ಪ್ರಗತಿಯಿಂದಾಗಿ ಸದಸ್ಯರುಗಳಿಗೆ ಎಲ್ಲಾ ತರಹ ಸಾಲ ಸೌಲಭ್ಯಗಳನ್ನು ತ್ವರಿತವಾಗಿ ಒದಗಿಸಲು ಸಾಧ್ಯವಾಗಿದೆ. ಠೇವಣಿ ಮತ್ತು ಸಾಲಗಳ ಅನುಪಾತ (CD Ratio) ವರ್ಷಾಂತ್ಯಕ್ಕೆ ಶೇ.58.10 ಇದ್ದು, ಸದಸ್ಯರುಗಳು ಅರ್ಜಿ ಸಲ್ಲಿಸಿದ ಕೇವಲ ಒಂದು ವಾರದೊಳಗೆ ಆಧಾರದ ಸಾಲಗಳು ಮತ್ತು ಆಧಾರವಿಲ್ಲದ ಸಾಲಗಳನ್ನು, ಒಂದು ತಿಂಗಳೊಳಗಾಗಿ ಅಡಮಾನ ಸಾಲಗಳನ್ನು ಮಂಜೂರು ಮಾಡಿಕೊಂಡಿಲಾಗುತ್ತಿದೆ. ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದ ಮೇರೆಗೆ ಆರ್ಥಿಕವಾಗಿ ಹಿಂದುಳಿದ ಜನಾಂಗಕ್ಕೆ, ಆರ್ಥಿಕ ದುರ್ಬಲರಿಗೆ ಸಾಲ ಸೌಲಭ್ಯಗಳನ್ನು ನೀಡಲಾಗುತ್ತಿದೆ.

ಸದಸ್ಯರಿಗೆ ತ್ವರಿತಗತಿಯಲ್ಲಿ ಸಾಲ ಸೌಲಭ್ಯಗಳನ್ನು ಒದಗಿಸುತ್ತಿದ್ದು ಇದರ ಉಪಯೋಗವನ್ನು ಪಡೆದುಕೊಳ್ಳಬೇಕಾಗಿ ವಿನಂತಿ.

2) ನಿರ್ದೇಶಕರ ಸಾಲಗಳು :

ನಿರ್ದೇಶಕರ ಹಾಗೂ ಅವರ ಸಂಬಂಧಿಗಳಿಗೆ ಯಾವುದೇ ತರಹದ ಸಾಲಗಳನ್ನು ನೀಡಿರುವುದಿಲ್ಲ.

ಹಾಲಿ ವಿವಿಧ ಸಾಲಗಳ ಗರಿಷ್ಠ ಮಿತಿ ಮತ್ತು ಬಡ್ಡಿ ದರ ಕೆಳಕಂಡಂತಿರುತ್ತದೆ.

ಕ್ರ. ಸಂ.	ಸಾಲದ ವಿಧಗಳು	ಸಾಲದ ಮೊತ್ತ	ಬಡ್ಡಿ ದರ
1	ಆಧಾರವಿಲ್ಲದ ಸಾಲಗಳು	ಗರಿಷ್ಠ ರೂ. 2 ಲಕ್ಷಗಳು	ಶೇ. 13
2	ಆಭರಣ ಸಾಲ	ಗರಿಷ್ಠ ರೂ. 10 ಲಕ್ಷಗಳು ಕನಿಷ್ಠ ರೂ. 10,000/– ರೂ. 2ಲಕ್ಷಗಳವರೆಗೆ ರೂ. 2 ಲಕ್ಷ ಮೇಲ್ಪಟ್ಟು ರೂ.10 ಲಕ್ಷಗಳವರೆಗೆ	ಶೇ. 11 ಶೇ. 12
3	ವಾಹನ ಸಾಲ	ಗರಿಷ್ಠ ರೂ. 40 ಲಕ್ಷಗಳು	ಶೇ. 10
4	ಓವರ್ ಡ್ರಾಫ್ಟ್ – ಸ್ವತ್ತಿನ ಮೇಲೆ	ಗರಿಷ್ಠ ರೂ. 2 ಕೋಟಿ	ಶೇ. 13
5	ಓವರ್ ಡ್ರಾಫ್ಟ್ – ಠೇವಣಿಗಳ ಮೇಲೆ	ಠೇವಣಿ ಮೊತ್ತದ ಮೇಲೆ ಶೇ.90 ರಷ್ಟು	ಠೇವಣಿ ಬಡ್ಡಿದರದ ಮೇಲೆ ಶೇ.2 ರಷ್ಟು ಹೆಚ್ಚಿಗೆ
6	1) ವ್ಯಾಪಾರ ಅಭಿವೃದ್ಧಿ ಸಾಲಗಳು 2) ವಾಣಿಜ್ಯ ಸಂಕೀರ್ಣ ಕಟ್ಟಲು (for group borrowers)	ಗರಿಷ್ಠ ರೂ. 3 ಕೋಟಿಗಳು ಗರಿಷ್ಠ ರೂ. 5 ಕೋಟಿಗಳು	ಶೇ. 12
7	ಮನೆ ಕಟ್ಟಲು ಮತ್ತು ಮನೆ ಕೊಳ್ಳಲು	ಗರಿಷ್ಠ ರೂ. 70 ಲಕ್ಷಗಳು	ಶೇ. 10
8	ನಿವೇಶನ ಕೊಳ್ಳಲು ಜೊತೆಗೆ ಕಟ್ಟಡ ಕಟ್ಟಲು (ಒಟ್ಟು)	ಗರಿಷ್ಠ ರೂ. 70 ಲಕ್ಷಗಳು	ಶೇ. 11
9	ನಿವೇಶನ ಕೊಳ್ಳಲು	ಗರಿಷ್ಠ ರೂ. 40 ಲಕ್ಷಗಳು	ಶೇ. 12
10	ಸಾಲ ತೀರಿಸಲು	ಗರಿಷ್ಠ ರೂ. 70 ಲಕ್ಷಗಳು	ಶೇ. 12
11	ಮದುವೆ ಉದ್ದೇಶಕ್ಕೆ	ಗರಿಷ್ಠ ರೂ. 25 ಲಕ್ಷಗಳು	ಶೇ. 12
12	ರಿಪೇರಿ ಮತ್ತು ನವೀಕರಣಕ್ಕೆ	ಗರಿಷ್ಠ ರೂ. 5 ಲಕ್ಷಗಳು	ಶೇ. 12
13	ವಿದ್ಯಾಭ್ಯಾಸಕ್ಕಾಗಿ	ಗರಿಷ್ಠ ರೂ. 15 ಲಕ್ಷಗಳು ರೂ. 5 ಲಕ್ಷಗಳವರೆಗೆ ರೂ. 5 ಲಕ್ಷ ಮೇಲ್ಪಟ್ಟು ಮತ್ತು ರೂ. 15 ಲಕ್ಷಗಳವರೆಗೆ	ಶೇ. 10 ಶೇ. 11
14	ಸ್ವತ್ತಿನ ಮೇಲಿನ ಬಾಡಿಗೆ ರಿಯಾಯಿತಿ ಸಾಲಗಳು	ಗರಿಷ್ಠ ರೂ. 3 ಕೋಟಿಗಳವರೆಗೆ	ಶೇ. 10

ಈ ಎಲ್ಲಾ ಸಾಲಗಳ ಮಂಜೂರಾತಿಗಾಗಿ ಸ್ವತ್ತಿನ ಮೌಲ್ಯ, ಅರ್ಜಿದಾರರ ನಿವ್ವಳ ಆದಾಯ, ಮರುಪಾವತಿ ಶಕ್ತಿ ಹಾಗೂ ಇನ್‌ಕಂಟ್ಯಾಕ್ಸ್ ಅಸೆಸ್‌ಮೆಂಟ್ ಆರ್ಡರ್ ಇವುಗಳನ್ನು ಗಣನೆಗೆ ತೆಗೆದುಕೊಂಡು ಅರ್ಹತೆ ಆಧಾರದ ಮೇಲೆ ಸಾಲ ಮಂಜೂರು ಮಾಡಲಾಗುತ್ತಿದೆ. ಸದಸ್ಯರುಗಳು ಈ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಸಾಲ ಪಡೆದು, ಸಾಲಗಳನ್ನು ಸಕಾಲಕ್ಕೆ ಮರುಪಾವತಿ ಮಾಡಬೇಕೆಂದು ಕೋರಿದೆ.

ಜಯನಗರ, ಮತ್ತೀಕೆರೆ, ವಿಜಯನಗರ, ಕೆಂಗೇರಿ, ಯಲಹಂಕ ಮತ್ತು ಬೇಗೂರು ಶಾಖೆಗಳಲ್ಲಿ ಚಿನ್ನಾಭರಣ ಮೇಲಿನ ಸಾಲಗಳನ್ನು ನೀಡಲಾಗುತ್ತಿದೆ.

7. ಸುಸ್ತಿ ಸಾಲ ಹಾಗೂ ಅನುತ್ಪಾದಕ ಆಸ್ತಿಗಳು :–

ಅ) ಸುಸ್ತಿಯಾದ ಸಾಲಗಳ ಕಾಲಾವಧಿ ವಿಂಗಡಣೆಯ ತುಲನಾತ್ಮಕ ವಿವರ ಈ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

ವಿವರ	ಸುಸ್ತಿಯಾದ ಸಾಲದ ಮೊತ್ತ				
	31.03.2014	31.03.2015	31.03.2016	31.03.2017	31.03.2018
ಒಂದು ವರ್ಷದ ಒಳಗೆ	101.42	160.38	159.04	156.33	126.73
1 ವರ್ಷಕ್ಕೆ ಮೇಲ್ಪಟ್ಟು 2 ವರ್ಷದವರೆಗೆ	6.06	36.00	40.42	38.46	16.64
2 ವರ್ಷಕ್ಕೆ ಮೇಲ್ಪಟ್ಟು 3 ವರ್ಷದವರೆಗೆ	3.63	17.50	22.00	70.90	37.20
3 ವರ್ಷಕ್ಕೆ ಮೇಲ್ಪಟ್ಟು	129.35	85.34	74.14	72.44	131.73
ಒಟ್ಟು	**240.46**	**299.22**	**295.60**	**338.13**	**312.30**

ದಿನಾಂಕ : 31.03.2018ಕ್ಕೆ ರೂ.312.30 ಲಕ್ಷಗಳ ಸುಸ್ತಿ ಮೊತ್ತ ಬಾಕಿ ಇದ್ದು, ಇದನ್ನು ಇನ್ನೂ ಕಡಿಮೆ ಮಾಡಲು ತೀವ್ರವಾದ ವಸೂಲಾತಿ ಕ್ರಮಕೈಗೊಳ್ಳಲಾಗಿದೆ.

ಆ) ಭಾರತೀಯ ರಿಸರ್ವ್ ಬ್ಯಾಂಕಿನ ನಿಯಮಗಳಿಗನುಸಾರವಾಗಿ ಅನುತ್ಪಾದಕ ಆಸ್ತಿಗಳ ವಿವರ ಕೆಳಕಂಡಂತಿವೆ.

ವರ್ಷ	ಒಟ್ಟು ಅನುತ್ಪಾದಕ ಆಸ್ತಿ (Gross NPA)		ನಿವ್ವಳ ಅನುತ್ಪಾದಕ ಆಸ್ತಿ (Net NPA)	
	ಮೊತ್ತ	ಶೇ.	ಮೊತ್ತ	ಶೇ.
31.03.2010	370.65	4.98	(-) 578.17	0 (- 8.90)
31.03.2011	341.68	4.27	(-) 607.14	0 (- 8.61)
31.03.2012	340.12	3.61	(-) 612.29	0 (- 7.23)

31.03.2013	309.92	2.73	(-) 642.49	0 (- 6.18)
31.03.2014	360.88	2.29	(-) 591.53	0 (- 4.16)
31.03.2015	853.78	4.44	(-) 123.02	0 (- 0.67)
31.03.2016	896.70	4.29	(-) 80.04	0 (- 0.40)
31.03.2017	1348.89	6.44	372.09	1.86
31.03.2018	1023.48	4.09	52.86	0.22

ನಿವ್ವಳ ಅನುತ್ಪಾದಕ ಆಸ್ತಿಯ ಪ್ರಮಾಣ ನಿವ್ವಳ ಸಾಲಗಳ ಮೇಲೆ ಶೇ.0.22 ಮತ್ತು ಒಟ್ಟು ಅನುತ್ಪಾದಕ ಆಸ್ತಿ ಸಾಲಗಳ ಮೇಲೆ ಶೇ.4.09ರಷ್ಟು ಇರುತ್ತದೆ. ಇದನ್ನು ಇನ್ನೂ ಕಡಿಮೆ ಮಾಡಲು ಅಗತ್ಯ ವಸೂಲಾತಿ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಭಾರತೀಯ ರಿಸರ್ವ್ ಬ್ಯಾಂಕ್ ಸೂಚಿಸಿರುವ ಗರಿಷ್ಠ ನಿವ್ವಳ ಎನ್.ಪಿ.ಎ. ಪ್ರಮಾಣವು ಶೇ.10 ಇರಬಹುದಾದರೂ, ಬ್ಯಾಂಕಿನ ನಿವ್ವಳ ಅನುತ್ಪಾದಕ ಮಟ್ಟ ಶೇ.0.22 ಆಗಿರುತ್ತದೆ. ಆದರೂ ಒಟ್ಟು ಅನುತ್ಪಾದಕ ಆಸ್ತಿಯನ್ನು ಇನ್ನೂ ಕಡಿಮೆ ಮಾಡಲು ಸಾಲ ಪಡೆದ ಸದಸ್ಯರ ಸಹಕಾರ ಅತ್ಯಗತ್ಯ. ಆದ್ದರಿಂದ ಸಾಲದ ಕಂತುಗಳನ್ನು ನಿಯಮಿತವಾಗಿ ಸಂದಾಯ ಮಾಡಬೇಕೆಂದು ವಿನಂತಿಸುತ್ತೇವೆ.

ದಿನಾಂಕ : 31.03.2018ರ ಅಂತ್ಯಕ್ಕೆ ಬ್ಯಾಂಕಿನ ಮುಂಗಡಗಳು ರೂ.25039.14 ಲಕ್ಷಗಳಿಗೆ ತಲುಪಿರುತ್ತದೆ. ಸಾಲಗಳ ಮರುಪಾವತಿಯಲ್ಲಿ ಅಸಲನ್ನು ಅಥವಾ ಬಡ್ಡಿಯನ್ನು 3 ಕಂತುಗಳಿಗಿಂತ ಹೆಚ್ಚಿಗೆ ಮರುಪಾವತಿ ಮಾಡದೆ ಇರುವಂತಹ ಸಾಲಗಳನ್ನು ನಾನ ಪರ್‌ಫಾರ್ಮಿಂಗ್ ಅಸೆಟ್ಸ್ (ಎನ್.ಪಿ.ಎ.) ಆಗಿ ವಿಂಗಡಣೆ ಮಾಡಬೇಕೆಂದು ಭಾರತೀಯ ರಿಸರ್ವ್ ಬ್ಯಾಂಕ್ ನಿರ್ದೇಶನ ನೀಡಿದ್ದು, ಇಂತಹ ಸಾಲಗಳು ಎನ್.ಪಿ.ಎ. ಆಗಿ ವರ್ಗೀಕರಣಗೊಳ್ಳುತ್ತದೆ. ಇದರಿಂದಾಗಿ ಬ್ಯಾಂಕಿನ ಲಾಭದ ಮೇಲೆ ಪರಿಣಾಮ ಬೀರಲಿದೆ. ಆದುದರಿಂದ ಸುಸ್ತಿ ಇಲ್ಲದೆ ಸಾಲದ ಕಂತುಗಳನ್ನು ಅಸಲು ಮತ್ತು ಬಡ್ಡಿ ಸಮೇತ ಮರುಪಾವತಿಸಬೇಕೆಂದು ಸಾಲಗಾರರಲ್ಲಿ ಮತ್ತೊಮ್ಮೆ ವಿನಂತಿಸಿದೆ.

ದಿನಾಂಕ 31.03.2018ರ ಅಂತ್ಯಕ್ಕೆ ಎನ್.ಪಿ.ಎ.ಗೆ ಕಾಯ್ದಿರಿಸುವ ಒಟ್ಟು ಮೊತ್ತ ರೂ.970.62 ಲಕ್ಷಗಳಾಗಿರುತ್ತದೆ. ಅನುತ್ಪಾದ ಆಸ್ತಿಯಾಗಿ ವರ್ಗೀಕರಣಗೊಂಡ ಸಾಲಗಳ ಪೂರ್ತಿ ಮೊತ್ತವನ್ನು ಲಾಭದಿಂದ ಕಾಯ್ದಿರಿಸಬೇಕಾಗಿರುವುದರಿಂದ ಲಾಭ ಕಡಿಮೆಯಾಗುವುದಲ್ಲದೆ, ಡಿವಿಡೆಂಡ್ ನೀಡಲು ಸಹ ಸಾಧ್ಯವಾಗುವುದಿಲ್ಲ. ಸುಸ್ತಿ ಇಲ್ಲದೆ ಸಾಲದ ಕಂತುಗಳನ್ನು ಅಸಲು ಮತ್ತು ಬಡ್ಡಿ ಸಮೇತ ಮರುಪಾವತಿಸಬೇಕೆಂದು ಸಾಲಗಾರರಲ್ಲಿ ವಿನಂತಿಸಿದೆ.

ಸಾಲಗಾರರು ಸಾಲದ ಕಂತುಗಳನ್ನು ಕ್ರಮಬದ್ಧವಾಗಿ ಪಾವತಿಸುವುದರಿಂದ ಸುಸ್ತಿ ಬಡ್ಡಿ ಮತ್ತು ಇತರೆ ಖರ್ಚುಗಳನ್ನು ಸಾಲಗಾರರಿಂದ ವಸೂಲಾತಿ ಮಾಡುವುದು ತಪ್ಪುತ್ತದೆ ಮತ್ತು ಸಾಲಗಳ ವಸೂಲಿಗಾಗಿ ಹೂಡುವ ಕೇಸುಗಳಿಗೆ ತಗಲುವ ವೆಚ್ಚಗಳನ್ನು ಸಹ ತಪ್ಪಿಸಬಹುದು. ಮಾನ್ಯ ಸದಸ್ಯರುಗಳು ಪಡೆದಿರುವ ಸಾಲಗಳನ್ನು ಸಮರ್ಪಕವಾಗಿ ಸುಸ್ತಿ ಇಲ್ಲದೆ, ವೇಳೆಗೆ ಸರಿಯಾಗಿ

ಮರುಪಾವತಿಸಿ ಸಹಕರಿಸಬೇಕೆಂದು ಮತ್ತೊಮ್ಮೆ ಕೋರಲಾಗಿದೆ. ಇದರಿಂದ ಬ್ಯಾಂಕು ಇನ್ನೂ ಹೆಚ್ಚಿನ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗುತ್ತದೆ.

ಆಡಳಿತ ಮಂಡಳಿಯು ಸಾಲಗಾರರು ಸಾಲವನ್ನು ಸಮಯಕ್ಕೆ ಸರಿಯಾಗಿ ಮರುಪಾವತಿ ಮಾಡಲು ಅವಕಾಶ ಕಲ್ಪಿಸುವ ಉದ್ದೇಶದಿಂದ ಸಾಲಗಾರರು ಸಾಲದ ಕಂತುಗಳನ್ನು ಬಡ್ಡಿ ಸಹಿತ ನಿಗದಿತ ಅವಧಿಯೊಳಗೆ ಪಾವತಿ ಮಾಡಿದಲ್ಲಿ ಪಾವತಿಸಿದ ಬಡ್ಡಿಯಲ್ಲಿ ಶೇ.1 ರಂತೆ ಬಡ್ಡಿ ರಿಯಾಯಿತಿ ನೀಡಲಾಗುತ್ತಿದೆ. ಬಡ್ಡಿ ರಿಯಾಯತಿಯನ್ನು ಆಯಾ ವರ್ಷ ಪೂರ್ಣಗೊಂಡ ತಕ್ಷಣ ಅರ್ಜಿ ಸಲ್ಲಿಸಿ ಈ ರಿಯಾಯಿತಿಯನ್ನು ಪಡೆಯುವುದು.

ಭಾರತೀಯ ರಿಸರ್ವ್ ಬ್ಯಾಂಕಿನಿಂದ ಅನುತ್ಪಾದಕ ಆಸ್ತಿ (ಎನ್.ಪಿ.ಎ.) ನೀತಿಯ ಬಗ್ಗೆ ಅನೇಕ ಸುತ್ತೋಲೆಗಳು ಬಂದಿದ್ದು. ಈ ಸುತ್ತೋಲೆಗಳ ನಿರ್ದೇಶನಗಳನ್ನು ಜಾರಿಗೊಳಿಸುವುದಕೋಸ್ಕರ ಸಾಲ ವಸೂಲಾತಿ ನಿಯಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸಲಾಗುತ್ತಿದೆ. ಸುಸ್ತಿ ಸಾಲಗಳ ವಸೂಲಾತಿಗಾಗಿ ಕೇಸುಗಳನ್ನು ಫೈಲು ಮಾಡಿ, ಜಪ್ತಿ ಮತ್ತು ಸ್ವತ್ತನ್ನು ಹರಾಜಿಗೆ ಒಳಪಡಿಸಿ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗಿದೆ. ಹಾಗೂ ಆಗಿಂದಾಗ್ಗೆ ಸುಸ್ತಿದಾರರ ಮನೆಗಳಿಗೆ ಮತ್ತು ಕಛೇರಿಗಳಿಗೆ ಭೇಟಿ ನೀಡಿ ಸುಸ್ತಿ ಸಾಲಗಳನ್ನು ನಿರ್ದಾಕ್ಷಣ್ಯವಾಗಿ ವಸೂಲಿ ಮಾಡಲಾಗುತ್ತಿದೆ. ಆದ್ದರಿಂದ ಸಾಲ ಪಡೆದ ಸದಸ್ಯರಲ್ಲಿ ಕಳಕಳಿಯ ಮನವಿಯೇನೆಂದರೆ ದಯವಿಟ್ಟು ಯಾವ ಕಾರಣಕ್ಕು ಸುಸ್ತಿದಾರರಾಗಬೇಡಿ. ಒಂದು ವೇಳೆ ಸುಸ್ತಿದರರಾದಲ್ಲಿ ಅಂತಹವರ ಮೇಲೆ ನಿರ್ದಾಕ್ಷಿಣ್ಯವಾಗಿ ಎಲ್ಲಾ ಕಾನೂನಿನ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು. ಸದಸ್ಯರುಗಳು ಪಡೆದಂತಹ ಸಾಲಗಳ ಕಂತುಗಳನ್ನು ಕ್ರಮಬದ್ಧವಾಗಿ ಮರುಪಾವತಿಸಿ ಬ್ಯಾಂಕಿನ ಬೆಳವಣಿಗೆಗೆ ಸಹಕರಿಸಬೇಕಾಗಿ ಕೋರಿದೆ.

ಸ್ಥಿರಾಸ್ತಿ ಮೇಲಿನ ಸುಸ್ತಿ ಸಾಲಗಳ ವಸೂಲಾತಿ ಬಗ್ಗೆ ಕೇಂದ್ರ ಸರ್ಕಾರ (SARFAESIA) ಸರ್ಫೇಸಿಯಾ ಕಾಯ್ದೆಯನ್ನು ಕಾಯಿದೆ 54ರ ಪ್ರಕಾರ ದಿನಾಂಕ 28.01.2003 ರಿಂದ ಸಹಕಾರ ಬ್ಯಾಂಕಗಳಿಗೆ ಅನ್ವಯಿಸುವಂತೆ ಜಾರಿಗೊಳಿಸಿದೆ. ರಿಸರ್ವ್ ಬ್ಯಾಂಕ್ ನಿರ್ದೇಶನದಂತೆ ಮೇಲ್ಕಂಡ ಕಾಯಿದೆ ಸೆಕ್ಷನ್ 13(2)ರ ಅಡಿಯಲ್ಲಿ ಸುಸ್ತಿ ಸಾಲಗಾರರಿಗೆ ನೋಟೀಸ್ ಜಾರಿ ಮಾಡಿ 60 ದಿನಗಳೊಳಗಾಗಿ ಪೂರ್ತಿ ಸಾಲ/ಬಡ್ಡಿ ಇನ್ನಿತರ ಖರ್ಚು–ವೆಚ್ಚಗಳನ್ನು ಪಾವತಿಸಲು ತಪ್ಪಿದ್ದಲ್ಲಿ ಕಾಯಿದೆ ಸೆಕ್ಷನ್ 13(4)ರ ಪ್ರಕಾರ ಸಾಲಕ್ಕೆ ನೀಡಿದ ಸ್ಥಿರಾಸ್ತಿ / ಯಂತ್ರೋಪಕರಣಗಳನ್ನು ಬ್ಯಾಂಕಿನ ವಶಕ್ಕೆ ತೆಗೆದುಕೊಂಡು 30 ದಿನಗಳ ನೋಟೀಸ್ ಜಾರಿ ಮಾಡಿ ಮಾರಾಟ ಮಾಡಲು ಅಧಿಕೃತ ಅಧಿಕಾರಿಯನ್ನು (Authorised Officer) ನೇಮಿಸಲಾಗಿದೆ. ಈ ಕಾಯಿದೆಯನ್ವಯ ಸುಸ್ತಿದಾರರಿಗೆ ಈಗಾಗಲೇ ನೋಟೀಸ್ ಜಾರಿ ಮಾಡಿ ಸ್ಥಿರಾಸ್ತಿಗಳ ಬಹಿರಂಗ ಹರಾಜಿಗೆ ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡಲು ಕ್ರಮಕೈಗೊಂಡಿದೆ.

ಈ ಕಾಯಿದೆಯನ್ವಯ ವಸೂಲಾತಿ ಕ್ರಮಗಳು ಕಠಿಣ ಪರಿಸ್ಥಿತಿ ತಂದೊಡ್ಡುವುದಲ್ಲದೆ ದಿನ

ಪತ್ರಿಕೆಗಳಲ್ಲಿ ನೀಡುವ ಜಾಹಿರಾತು ವೆಚ್ಚ, ಇನ್ನಿತರ ವೆಚ್ಚಗಳನ್ನು ಸಾಲಗಾರರೇ ಭರಿಸಬೇಕಾಗಿರುವುದರಿಂದ ಸಾಲಗಾರರು ತಮ್ಮ ಸಾಲದ ಕಂತುಗಳನ್ನು ಸಕಾಲದಲ್ಲಿ ಮರುಪಾವತಿ ಮಾಡಬೇಕೆಂದು ಕೋರಲಾಗಿದೆ.

8. ಲಾಭದ ಹಂಚಿಕೆ :

· ಬ್ಯಾಂಕು 2017–18ನೇ ಸಾಲಿನಲ್ಲಿ ಒಟ್ಟು ಲಾಭ ರೂ.412.70 ಲಕ್ಷ ಗಳಿಸಿದ್ದು. ಆದಾಯ ತೆರಿಗೆ ಪೂರ್ವ ನಿವ್ವಳ ಲಾಭ ರೂ.290.15 ಲಕ್ಷಗಳು ಮತ್ತು ಆದಾಯ ತೆರಿಗೆ ಪಾವತಿ ನಂತರ ರೂ.171.72 ಲಕ್ಷ ಲಾಭ ಗಳಿಸಿದೆಯೆಂದು ತಿಳಿಸಲು ಹರ್ಷಿಸುತ್ತೇವೆ. ಈ ವರ್ಷ ಶೇ.14 ರಷ್ಟು ಡಿವಿಡೆಂಡ್ ನೀಡಲು ಆಡಳಿತ ಮಂಡಳಿ ಶಿಫಾರಸ್ಸು ಮಾಡಿದೆ.

ಬ್ಯಾಂಕು 2017–18ನೆ ಸಾಲಿನಲ್ಲಿ ಗಳಿಸಿರುವ ನಿವ್ವಳ ಲಾಭ ರೂ. 1,71,72,126.48 ಗಳನ್ನು ಕೆಳಕಂಡಂತೆ ಹಂಚಿಕೆ ಮಾಡಲಾಗಿದೆ ಮತ್ತು ಇದಕ್ಕೆ ಮಹಾಸಭೆಯ ಅನುಮೋಧನೆಯನ್ನು ಕೋರಲಾಗಿದೆ.

(ರೂ.ಗಳಲ್ಲಿ)

ಕ್ರ. ಸಂ.	ಬಾಬ್ತುಗಳು		ಲಾಭದ ಹಂಚಿಕೆ
1	ಕಾಯ್ದಿಟ್ಟ ನಿಧಿ	ಶೇ.25	42,93,031.00
2	ಸಹಕಾರ ಶಿಕ್ಷಣ ನಿಧಿ	ಶೇ.2	2,57,582.00
3	ಸಹಕಾರ ಶಿಕ್ಷಣ ನಿಧಿ, ಸಹಕಾರ ಬ್ಯಾಂಕುಗಳ ಮಹಾಮಂಡಳಕ್ಕೆ	ಶೇ.1	1,28,791.00
4	ಕಟ್ಟಡ ನಿಧಿ	ಶೇ.15	18,73,908.00
5	ಸದಸ್ಯರ ಕ್ಷೇಮಾಭಿವೃದ್ಧಿ ನಿಧಿ	ಶೇ.1	1,24,927.00
6	ಹೂಡಿಕೆಗಳ ಏರಿಳಿತ ನಿಧಿ	ಶೇ.5	6,24,636.00
7	ಸದಸ್ಯರ ಮರಣೋತ್ತರ ನಿಧಿ	ಶೇ.2	2,49,854.00
8	ಲಾಭಾಂಶ / ಡಿವಿಡೆಂಡ್	ಶೇ.14	95,30,688.00
9	ಉಳಿಕೆ ಮೊತ್ತ ಕಾಯ್ದಿಟ್ಟ ನಿಧಿಗೆ		88,709.48
			ರೂ.1,71,72,126.48

9. ವರಮಾನ ತೆರಿಗೆ :–

2006ನೇ ವರ್ಷದ ಕೇಂದ್ರ ಸರ್ಕಾರದ ಮುಂಗಡ ಪತ್ರದಲ್ಲಿ ಸಹಕಾರ ಬ್ಯಾಂಕುಗಳ ನಿವ್ವಳ ಲಾಭದ ಮೇಲೆ ಆದಾಯ ತೆರಿಗೆ ಕಾಯ್ದೆ1961 ಕಲಂ 80 ಪಿ ರದ್ದಾಗಿ, ಪಟ್ಟಣ ಸಹಕಾರ ಬ್ಯಾಂಕುಗಳು 2006-07ನೇ ಸಾಲಿನಿಂದ ಆದಾಯ ತೆರಿಗೆಯನ್ನು ಪಾವತಿಸಬೇಕಾಗಿದೆ. ಆದಾಯ ತೆರಿಗೆ ಕಾಯ್ದೆ 1961 ರನ್ವಯ ಪಟ್ಟಣ ಸಹಕಾರ ಬ್ಯಾಂಕುಗಳು ಪ್ರತಿ ವರ್ಷ ತಮ್ಮ ನಿವ್ವಳ ಲಾಭದ ಮೇಲೆ ಶೇ.31.20ರಷ್ಟು ಆದಾಯ ತೆರಿಗೆಯನ್ನು ಮತ್ತು ಶೇ.12 ಸರ್‌ಚಾರ್ಜ್‌ನ್ನು ಆದಾಯ ತೆರಿಗೆ

ಇಲಾಖೆಗೆ ಪಾವತಿ ಮಾಡಬೇಕಾಗಿದ್ದು, ಅದರಲ್ಲೂ ಮುಂದಿನ ವರ್ಷದ ಲಾಭವನ್ನು ಅಂದಾಜು ಮಾಡಿ ಅದರ ಮೇಲಿನ ತೆರಿಗೆಯ ಮೊದಲನೆ ಕಂತನ್ನು ಪ್ರಸಕ್ತ ಸಾಲಿನ ಜೂನ್ 15ರ ಒಳಗೆ, 2ನೇ ಕಂತನ್ನು ಸೆಪ್ಟೆಂಬರ್ 15ರೊಳಗೆ, 3ನೇ ಕಂತನ್ನು ಡಿಸೆಂಬರ್ 15ರೊಳಗೆ, 4ನೇ ಕಂತನ್ನು ಮಾರ್ಚ್ 15ರೊಳಗೆ ಮುಂಗಡವಾಗಿ ಪಾವತಿಸಬೇಕಾಗಿರುತ್ತದೆ. 2017–18ನೇ ಸಾಲಿನಲ್ಲಿ ಬ್ಯಾಂಕು ರೂ.118.43 ಲಕ್ಷ ಆದಾಯ ತೆರಿಗೆಯನ್ನು ಪಾವತಿಸಿದೆ. ಇದರ ಪರಿಣಾಮವಾಗಿ ಲಾಭದಲ್ಲಿ ರೂ.118.43 ಲಕ್ಷ ಕಡಿಮೆಯಾಗಿರುತ್ತದೆ.

10. ಶಾಖೆಗಳ ಪ್ರಗತಿ : –

ವರದಿ ಸಾಲಿನಲ್ಲಿ ಎಲ್ಲಾ ಶಾಖೆಗಳು ಉತ್ತಮವಾಗಿ ಕಾರ್ಯನಿರ್ವಹಿಸಿವೆ. ದಿನಾಂಕ 31.03.2018ಕ್ಕೆ ಬ್ಯಾಂಕಿನ ಶಾಖಾವಾರು ಠೇವಣಿ ಮತ್ತು ಸಾಲಗಳ ತುಲನಾತ್ಮಕ ವಿವರ ಈ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

ಶಾಖೆಗಳು	31.03.2015		31.03.2016		31.03.2017		31.03.2018	
	ಠೇವಣಿಗಳು	ಸಾಲಗಳು	ಠೇವಣಿಗಳು	ಸಾಲಗಳು	ಠೇವಣಿಗಳು	ಸಾಲಗಳು	ಠೇವಣಿಗಳು	ಸಾಲಗಳು
ಕೇಂದ್ರ ಕಛೇರಿ / ಜಯನಗರ	12755.94	6998.97	15719.01	7733.95	18172.01	7814.42	19528.81	8516.52
ಮತ್ತೀಕೆರೆ	4745.97	4162.64	5123.08	4727.03	6273.64	4596.59	7373.12	6385.01
ವಿಜಯನಗರ	3145.96	2390.56	3345.76	2668.28	4290.01	2235.58	4317.05	2373.46
ಇಂದಿರಾನಗರ	2060.10	1192.02	1581.17	1403.45	2797.72	1566.97	3260.29	1879.40
ಕೆಂಗೇರಿ	1631.17	1034.75	2317.50	1001.16	1582.17	1034.28	1713.76	1471.80
ಯಲಹಂಕ	2626.88	2592.36	3102.55	2655.97	4054.09	2953.46	4343.13	3407.51
ಬಿ.ಇ.ಎಸ್. ಕಾಲೇಜು	1625.19	842.42	1934.66	702.20	2241.60	755.43	2475.89	928.57
ಬೇಗೂರು	–	–	–	–	–	–	83.93	76.87
ಒಟ್ಟು	28591.21	19213.72	33123.73	20892.04	39411.24	20956.73	43095.98	25039.14

ಬ್ಯಾಂಕಿನ ಕೇಂದ್ರ ಕಛೇರಿ, ಮತ್ತೀಕೆರೆ ಮತ್ತು ಯಲಹಂಕ ಶಾಖೆಗಳು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ. ವಿಜಯನಗರ, ಇಂದಿರಾನಗರ, ಕೆಂಗೇರಿ, ಬಿ.ಇ.ಎಸ್. ಕಾಲೇಜು ಮತ್ತು ಬೇಗೂರು ಶಾಖೆಗಳು ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಈ ಎಲ್ಲಾ ಶಾಖೆಗಳಿಗೆ ಸ್ವಂತ

ಕಟ್ಟಡ ಹೊಂದುವ ಉದ್ದೇಶದಿಂದ ಸೂಕ್ತ ನಿವೇಶನಗಳನ್ನು ಅನ್ವೇಷಣೆ ಮಾಡಲಾಗುತ್ತಿದೆ. ಮಾನ್ಯ ಸದಸ್ಯರು ಸೂಕ್ತ ನಿವೇಶನ ತಮ್ಮ ಗಮನಕ್ಕೆ ಬಂದಲ್ಲಿ ಕಾರ್ಯದರ್ಶಿಯವರಿಗೆ ತಿಳಿಸಬೇಕೆಂದು ಕೋರಿದೆ.

11. ಗಣಕೀಕರಣ:–

ಬ್ಯಾಂಕಿನ ಎಲ್ಲಾ ಶಾಖೆಗಳನ್ನು ಗಣಕೀಕರಣಗೊಳಿಸಲಾಗಿದ್ದು ದೈನಂದಿನ ವ್ಯವಹಾರಗಳನ್ನು ಗಣಕಯಂತ್ರದಲ್ಲಿಯೇ ನಿರ್ವಹಿಸಲಾಗುತ್ತಿದೆ. ಇದರಿಂದ ಸದಸ್ಯರಿಗೆ ಮತ್ತು ಗ್ರಾಹಕರಿಗೆ ತ್ವರಿತ ಮತ್ತು ಉತ್ತಮ ಸೇವೆ ನೀಡಲು ಅನುಕೂಲವಾಗಿದೆ. ಭಾರತೀಯ ರಿಸರ್ವ್ ಬ್ಯಾಂಕ್‌ನವರ ನಿರ್ದೇಶನದ ಮೇರೆಗೆ ಕೋರ್ ಬ್ಯಾಂಕಿಂಗ್ ತಂತ್ರಜ್ಞಾನವನ್ನು ದಿನಾಂಕ : 01.09.2015ರಿಂದ ಅಳವಡಿಸಿಕೊಂಡಿದ್ದು, ಎಲ್ಲಾ ವಹಿವಾಟುಗಳು ಸುಸೂತ್ರವಾಗಿ ನಡೆಯುತ್ತಿವೆ. ಇದರಿಂದ ಮಾನ್ಯ ಸದಸ್ಯರು/ಗ್ರಾಹಕರುಗಳು ಬ್ಯಾಂಕಿನ ಯಾವುದೇ ಶಾಖೆಯಲ್ಲಿ ವ್ಯವಹರಿಸಬಹುದು. ಅಲ್ಲದೆ ಬ್ಯಾಂಕು NEFT/RTGS ಸೌಲಭ್ಯ ಒದಗಿಸುತ್ತಿದೆ. ಬ್ಯಾಂಕು ATM ಸೌಲಭ್ಯವನ್ನು ಪ್ರಾರಂಭ ಮಾಡಿದೆ. ATM (Rupay Card) ಕಾರ್ಡ್‌ನ್ನು ಸದಸ್ಯರಿಗೆ/ಗ್ರಾಹಕರಿಗೆ ವಿತರಿಸಲಾಗುತ್ತಿದೆ. ಈ ಎಲ್ಲಾ ಸೇವೆ/ಸೌಲಭ್ಯಗಳನ್ನು ಉಪಯೋಗಿಸಿಕೊಳ್ಳಲು ಮಾನ್ಯ ಸದಸ್ಯರಲ್ಲಿ ವಿನಂತಿಸಿದೆ.

12. ಲಾಕರ್‌ಗಳು :–

ಬ್ಯಾಂಕಿನ ಪ್ರಧಾನ ಶಾಖೆ – ಜಯನಗರ, ಯಲಹಂಕ ಶಾಖೆ, ವಿಜಯನಗರ ಶಾಖೆ, ಕೆಂಗೇರಿ ಶಾಖೆ, ಮತ್ತೀಕೆರೆ ಶಾಖೆ, ಬಿ.ಇ.ಎಸ್. ಕಾಲೇಜು ಶಾಖೆ ಮತ್ತು ಬೇಗೂರು ಶಾಖೆಗಳಲ್ಲಿ ವಿವಿಧ ಗಾತ್ರದ ಸೇಫ್ ಡೆಪಾಸಿಟ್ ಲಾಕರ್ಸ್ ಸೌಲಭ್ಯ ನಾಮಿನಲ್ ಬಾಡಿಗೆಯಲ್ಲಿ ದೊರೆಯುತ್ತದೆ. ಸದಸ್ಯರುಗಳು ಈ ಸೌಲಭ್ಯ ಉಪಯೋಗಿಸಿಕೊಳ್ಳಲು ಕೋರಲಾಗಿದೆ.

13. ಬ್ಯಾಂಕಿನ ಶಾಸನಬದ್ಧ ಲೆಕ್ಕಪರಿಶೋಧನಾ ವ್ಯವಸ್ಥೆ :

ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು ನೀಡಿರುವ ಪ್ಯಾನಲ್‌ನಿಂದ ಸರ್ವಸದಸ್ಯರ ಸಭೆಯು ಆಯ್ಕೆ ಮಾಡಿದ ಮೆಸರ್ಸ್ ಎಸ್.ಆರ್.ಆರ್.ಕೆ ಶರ್ಮಾರವರಿಂದ ಲೆಕ್ಕ ಪರಿಶೋಧನೆಯಾಗಿದ್ದು, ಲೆಕ್ಕಪರಿಶೋಧನೆ ನಂತರ 2017-18ನೇ ಸಾಲಿಗೆ ಬ್ಯಾಂಕನ್ನು 'ಎ' ದರ್ಜೆಗೆ ವರ್ಗೀಕರಿಸಲಾಗಿದೆ.

2018–19ನೇ ಸಾಲಿನ ಲೆಕ್ಕಪರಿಶೋಧಕರ ಆಯ್ಕೆಗೆ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು ನೀಡಿರುವ ಪ್ಯಾನಲ್ ಪಟ್ಟಿಯಿಂದ ಆಡಳಿತ ಮಂಡಳಿಯು ಮೆಸರ್ಸ್ ಎಸ್.ಆರ್.ಆರ್.ಕೆ. ಶರ್ಮಾ ಅಸೋಸಿಯೇಟ್ಸ್ ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು ರವರನ್ನು ಈ ಸಾಲಿಗೂ ಸಹ ಆಯ್ಕೆ ಮಾಡಿದ್ದು, ಸರ್ವಸದಸ್ಯರ ಸಭೆಯು ಅವರನ್ನು ನೇಮಕ ಮಾಡಲು ಹಾಗೂ ಲೆಕ್ಕ ಪರಿಶೋಧಕರಿಗೆ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ನಿರ್ದೇಶಕರು ನಿಗದಿಪಡಿಸಿರುವ ಸಂಭಾವನೆಯನ್ನು ನೀಡಲು ಅನುಮೋಧನೆ ಕೋರಲಾಗಿದೆ.

14. ಪ್ರತ್ಯೇಕ ಆಂತರಿಕ ಲೆಕ್ಕಪರಿಶೋಧನಾ ವಿಭಾಗ :–

ಬ್ಯಾಂಕಿನ ಆಂತರಿಕ ಲೆಕ್ಕಪರಿಶೋಧನಾ ಉಪಸಮಿತಿಯ ಕ್ರಿಯಾಶೀಲತೆಯನ್ನು ಹೆಚ್ಚಿಸಿ, ಬ್ಯಾಂಕಿನಲ್ಲಿ ಪ್ರತ್ಯೇಕ ಲೆಕ್ಕಪರಿಶೋಧನಾ ವಿಭಾಗವನ್ನು ರಚಿಸಿ, ಭಾರತೀಯ ರಿಸರ್ವ್ ಬ್ಯಾಂಕಿನ ಲೆಕ್ಕಪರಿಶೋಧನಾ ಸಮಿತಿಯ ಕಾರ್ಯ ಚಟುವಟಿಕೆಗಳು, ಭಾರತೀಯ ರಿಸರ್ವ್ ಬ್ಯಾಂಕ್ ಹಾಕಿರುವ ಮಾರ್ಗ ಸೂಚಿಗಳನ್ವಯ ನಿರ್ವಹಿಸುವ ಬಗ್ಗೆ ಕ್ರಮ ತೆಗೆದುಕೊಂಡು ಶಾಖಾ ಪರಿವೀಕ್ಷಣೆ ಮಾಡಿ ವರದಿಯನ್ನು ಕಾರ್ಯಕಾರಿ ಮಂಡಳಿಗೆ ಸಲ್ಲಿಸಲಾಗುತ್ತಿದೆ.

15. ಸಿಬ್ಬಂದಿ :–

ವರದಿ ಸಾಲಿನಲ್ಲಿ ಆಡಳಿತ ಮಂಡಳಿಯು ಸಿಬ್ಬಂದಿ ವರ್ಗಕ್ಕೆ ಅನ್ವಯಿಸುವ ಎಲ್ಲಾ ಭತ್ಯೆಗಳನ್ನು ನೀಡುತ್ತಿದೆ. ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ಶಿಫಾರಸ್ಸು ಮಾಡಿರುವ 7ನೇ ವೇತನ ಆಯೋಗದ ವರದಿ ಅನ್ವಯ ಬ್ಯಾಂಕಿನ ಸಿಬ್ಬಂದಿಗಳಿಗೆ ವೇತನ ಶ್ರೇಣಿಗಳನ್ನು ನೀಡಿ ಇದನ್ನು ಅನುಷ್ಠಾನಗೊಳಿಸಿದೆ. ಸಿಬ್ಬಂದಿ ವರ್ಗಕ್ಕೆ ಕಡಿಮೆ ಬಡ್ಡಿದರದಲ್ಲಿ ಮನೆ ಸಾಲದ ಗರಿಷ್ಠ ಮಿತಿಯನ್ನು ರೂ.50 ಲಕ್ಷಗಳವರೆಗೆ, ಸಿಬ್ಬಂದಿ ಸಾಲವನ್ನು ರೂ.5 ಲಕ್ಷಗಳವರೆಗೂ ಮತ್ತು ವಾಹನ ಸಾಲದ ಗರಿಷ್ಠಮಿತಿಯನ್ನು ರೂ.5 ಲಕ್ಷಗಳವರೆಗೆ ಸಾಲ ಸೌಲಭ್ಯ ಕಲ್ಪಿಸಲಾಗಿದೆ. ಎಲ್ಲಾ ಸಿಬ್ಬಂದಿ ಮತ್ತು ಕುಟುಂಬ ವರ್ಗದವರಿಗೆ ವೈದ್ಯಕೀಯ ವಿಮಾ ಸೌಲಭ್ಯ ಗರಿಷ್ಠ ಮಿತಿ ರೂ.1,00,000/– ಗಳವರೆಗೆ ಕಲ್ಪಿಸಲಾಗಿದೆ.

16. 2018-19ನೇ ಸಾಲಿನ ಕಾರ್ಯಕ್ರಮದ ಪರಿಗಣನೆ

2018-19ನೇ ಸಾಲಿನ ಈ ಕೆಳಕಂಡವುಗಳನ್ನು ಅನುಷ್ಠಾನಕ್ಕೆ ತರಲು ಕಾರ್ಯಯೋಜನೆ ರೂಪಿಸಲಾಗಿದೆ.

1) ಹೆಚ್ಚಿನ ಸಾಲವನ್ನು ನೀಡಿ ಠೇವಣಿ ಮತ್ತು ಸಾಲಗಳ ಅನುಪಾತ (CD Ratio) ವನ್ನು ಶೇ.70ರಷ್ಟು ಸಾಧಿಸುವುದು.

2) ಒಟ್ಟು ವಹಿವಾಟು (Total Business) ಅನ್ನು ಕನಿಷ್ಠ ಶೇ.25ರಷ್ಟು ಪ್ರಗತಿ ಸಾಧಿಸುವುದು.

3) ಒಟ್ಟು ಎನ್.ಪಿ.ಎ ಪ್ರಮಾಣವನ್ನು ಶೇ.2ಕ್ಕಿಂತ ಕಡಿಮೆಗೆ ತರುವುದು.

4) ಮೊಬೈಲ್ ಬ್ಯಾಂಕಿಂಗ್ ಸೇವೆಯನ್ನು ಅನುಷ್ಠಾನಕ್ಕೆ ತರುವುದು.

5) ಸದಸ್ಯರು/ಗ್ರಾಹಕರು, ಅಂತರ್ಜಾಲ (Internet) ಮೂಲಕ ಬಿಲ್‌ಗಳು ಮತ್ತು ಇತರೆ ಖರ್ಚುಗಳನ್ನು ಪಾವತಿಸಲು ಅನುಷ್ಠಾನಗೊಳಿಸುವುದು.

ಕೃತಜ್ಞತೆಗಳು :

ಬ್ಯಾಂಕಿನ ಸರ್ವತೋಮುಖ ಬೆಳವಣಿಗೆಗೆ ಅಮೂಲ್ಯವಾದ ಸಲಹೆ ಹಾಗೂ ಮಾರ್ಗದರ್ಶನ ನೀಡುತ್ತಿರುವ ಭಾರತೀಯ ರಿಸರ್ವ್ ಬ್ಯಾಂಕ್, ಸಹಕಾರ ಇಲಾಖೆ ಹಾಗೂ ಆಡಿಟ್ ಇಲಾಖೆ, ಶಾಸನಬದ್ಧ ಲೆಕ್ಕಪರಿಶೋಧಕರಾದ ಮೆಸರ್ಸ್ ಎಸ್.ಆರ್.ಆರ್.ಕೆ. ಶರ್ಮಾ ಅಸೋಸಿಯೇಟ್ಸ್, ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ, ಅಪೆಕ್ಸ್ ಬ್ಯಾಂಕ್, ಸಂಘ-ಸಂಸ್ಥೆಗಳು, ಎಲ್ಲಾ ಠೇವಣಿದಾರರು, ಗ್ರಾಹಕರು, ಸದಸ್ಯರು ಮತ್ತು ಬ್ಯಾಂಕಿನ ಪುರೋಭಿವೃದ್ಧಿಗೆ ಎಲ್ಲಾ ರೀತಿಯಲ್ಲಿ ಮಾರ್ಗದರ್ಶನ ನೀಡುತ್ತಿರುವ ಬ್ಯಾಂಕಿನ ಸಂಸ್ಥಾಪಕರು ಮತ್ತು ಮಾಜಿ ವಿಶೇಷ ಜಿಲ್ಲಾಧಿಕಾರಿಗಳಾದ ಶ್ರೀ ಬಿ.ಎಲ್. ಲಕ್ಕೇಗೌಡರವರು ಮತ್ತು ನಿವ್ವಳ ಎನ್.ಪಿ.ಎ. ಕಡಿಮೆ ಮಾಡುವಲ್ಲಿ ಹೆಚ್ಚಿನ ಪರಿಶ್ರಮ ವಹಿಸಿ ಮಾರ್ಗದರ್ಶನ ನೀಡಿದ ಬ್ಯಾಂಕಿನ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಹಾಗೂ ಬ್ಯಾಂಕಿನ ಎಲ್ಲಾ ಸಿಬ್ಬಂದಿ ವರ್ಗದವರಿಗೂ ಕೂಡ ಕೃತಜ್ಞತೆಯನ್ನು ಸಲ್ಲಿಸುತ್ತೇವೆ.

ಬೆಂಗಳೂರು
ದಿನಾಂಕ : 29.08.2018

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಬಿ. ತುಳಸೀಧರ
ಪ್ರಭಾರ ಕಾರ್ಯದರ್ಶಿ